# Press Clipping

**Publication** : Vijaya Karnataka
**Date** : June 22, 2016
**Edition** : State
**Page** : 2, Lavalavike

# ನಿರುತ್ತರದಲ್ಲಿ ರಾಹುಲ್ ಉತ್ತರ



**ಬಾಲಿವುಡ್‌ನ ಪ್ರತಿಭಾವಂತ ನಟ ರಾಹುಲ್ ಬೋಸ್ ಇದೀಗ ಸ್ಯಾಂಡಲ್‌ವುಡ್‌ನಲ್ಲೂ ತಮ್ಮ ಪ್ರತಿಭೆ ಮೆರೆದಿದ್ದಾರೆ. ಹುಟ್ಟಾ ಕನ್ನಡಿಗರಂತೆಯೇ ಡಬ್ ಮಾಡಿ ಮೋಡಿ ಮಾಡಿದ್ದಾರವರು!**

ಪದ್ಮಾ ಶಿವಮೊಗ್ಗ
padmavathi.v@timesgroup.com

ಜಪಾನೀಸ್ ವೈಫ್, ತಕ್ಷಕ್, ಚಮೇಲಿ ಮತ್ತಿತರ ಚಿತ್ರಗಳಲ್ಲಿ ತಮ್ಮ ಅಭಿನಯದಿಂದ ಹೆಸರು ಮಾಡಿದ ನಟ ರಾಹುಲ್ ಬೋಸ್ ಕನ್ನಡ ಚಿತ್ರದಲ್ಲಿ ನಟಿಸಿರೋದು ಹಳೆಯ ವಿಷಯ. ಈ ಬೆಂಗಾಲಿ ಬಾಬುಗೆ ಕನ್ನಡವೂ ಕಷ್ಟವಲ್ಲ, ಇವರೀಗ ತಮ್ಮ ಪಾತ್ರಕ್ಕೆ ತಾವೇ ಧ್ವನಿ ನೀಡಿ ಮೆಚ್ಚುಗೆ ಗಳಿಸಿದ್ದಾರೆ.

ನಿರ್ದೇಶಕ ಅಪೂರ್ವ ರಾಹುಲ್ ಬೋಸ್‌ರನ್ನು ಡಬ್ ಮಾಡಲು ಸಾಧ್ಯವೇ ಎಂದು ಕೇಳಿದಾಗ ತಕ್ಷಣ ಒಪ್ಪಿಕೊಂಡರಂತೆ. 'ರಾಹುಲ್ ಅವರ ಧ್ವನಿ ಬಹಳ ಸ್ಪೆಷಲ್. ನನಗೆ ಆ ಪಾತ್ರಕ್ಕೆ ಅವರದೇ ಧ್ವನಿ ಬೇಕಿತ್ತು. ಬೇರೆ ಭಾಷೆಗಳಲ್ಲಿ ಡಬ್ ಮಾಡಿದ್ದಾರೆ ಎನ್ನುವುದು ಗೊತ್ತಿದ್ದರಿಂದ ಕೇಳಿದೆ. ಒಪ್ಪಿ ಸುಲಭವಾಗಿ ಡಬ್ ಮಾಡಿದರು' ಎನ್ನುತ್ತಾರೆ ಅಪೂರ್ವ. ಚಿತ್ರದಲ್ಲಿ ರಾಹುಲ್ ಕಾರ್ಪೊರೇಟ್ ಕಂಪನಿ ಅಧಿಕಾರಿಯಾಗಿ ನಟಿಸಿದ್ದಾರೆ. ನಟಿ ಭಾವನಾ ಇವರ ಪತ್ನಿಯಾಗಿ ಕಾಣಿಸಿಕೊಂಡಿದ್ದಾರೆ.

ಇದಕ್ಕಾಗಿ ಅಪೂರ್ವ ಅವರು ರಾಹುಲ್ ಡೈಲಾಗ್‌ಗಳನ್ನು ಹೇಗೆ ಉಚ್ಚರಿಸಬೇಕು ಎಂಬುದನ್ನು ರೆಕಾರ್ಡ್ ಮಾಡಿ ಕಳಿಸಿದ್ದರಂತೆ. ರಾಹುಲ್ ಡಬ್ಬಿಂಗ್‌ಗೆ ಮೊದಲೇ ಪ್ರತಿಯೊಂದು ಡೈಲಾಗ್ ಅನ್ನೂ ಕಲಿತುಕೊಂಡು ಬಂದಿದ್ದರಂತೆ. ನುರಿತ ಡಬ್ಬಿಂಗ್ ಕಲಾವಿದನಂತೆಯೇ ಸಲೀಸಾಗಿ ಡಬ್ಬಿಂಗ್ ಮಾಡಿದ್ದಾರೆ. 'ಸ್ಕ್ರೀನ್‌ನಲ್ಲಿ ಕನ್ನಡದವರೇ ಎನ್ನಿಸುವಂತೆ ಅವರ ಮಾತುಗಳು ಕೇಳಿಸುತ್ತವೆ. ಅಷ್ಟು ಸ್ಪಷ್ಟವಾಗಿ ಮಾತನಾಡಿದ್ದಾರೆ.' ಎನ್ನುತ್ತಾರೆ ಅಪೂರ್ವ. ರಾಹುಲ್ ಸಾಮಾನ್ಯವಾಗಿ ಪರಭಾಷೆಯಲ್ಲಿ ನಟಿಸಿದಾಗ ತಾವೇ ಡಬ್ ಮಾಡುತ್ತಾರೆ. ಇದಕ್ಕೂ ಮೊದಲು ತಮಿಳು ಚಿತ್ರದಲ್ಲಿ ನಟಿಸಿದಾಗ ತಾವೇ ಡಬ್ ಮಾಡಿದ್ದರು. ಅವರವರ ಪಾತ್ರಕ್ಕೆ ಅವರೇ ಧ್ವನಿ ನೀಡಬೇಕು ಅನ್ನೋದು ರಾಹುಲ್ ಅಭಿಪ್ರಾಯ. ■